ಅ) ನಿಗಮದ ಚರ ೧೫೩.೯೪೧ ಲಕ್ಷ ಹಾಗೂ ಸ್ಥಿರ ಆಸ್ತಿ ೦.೧೬೯ ಲಕ್ಷ ರೂಪಾಯಿಂಗಳು ೩೧–೩–೧೯೮೬ರ ಕೊನೆಗೆ ಮತ್ತು ಇಳಂವರಿ ನಿಧಿ ರೂ. ೧೨೨.೦೯ ಲಕ್ಷ ರೂಪಾಯಿಗಳಂ.

ಆ) ೧೯೭೪–೭೫ ರಿಂದ ೧೯೮೫–೮೬ರವರೆಗೆ ಕಾವಂಗಾರಿಯಂ ಮೊತ್ತ ರೂ. ೪೧೫೬.೦೦ ಲಕ್ಷ ರೂಪಾಯಿಗಳಂ.

		(ರೂ, ಲಕ್ಷಗಳಲ್ಲಿ)
೧)	೧೯೭೪–೭೫ ರಿಂದ ೧೯೮೨–೮೩ ರವರೆಗೆ	೧೪೨೨.೦೦
೨)	೧೯೮೩–೮೪ರಲ್ಲಿ	೫೩೩.೦೦
೩)	೧೯೮೪–೮೫ರಲ್ಲಿ	೮೧೫.೦೦
೪)	೧೯೮೫–೮೬ರಲ್ಲಿ	೧೩೧೬.೦೦
	ಒಟ್ಟು ರೂ.	೪೧೫೬.೦೦ ಲಕ್ಷ

ಈ) ರೂಪಾಯಿ ೨೫.೦೦ ಲಕ್ಷಗಳು.

ಶ್ರೀ ಜಿ. ರಾಜೂಗೌಡ.—ಸ್ವಾಮಿ, ಸರ್ಕಾರದಿಂದ ಮೂಲ ಬಂಡವಾಳ ಪಡೆದಿರತಕ್ಕದ್ದು ೨೫ ಲಕ್ಷ ರೂಪಾಯಿಂಗಳು. ಅಷ್ಟು ಹಣ ಈಗ ಇದೆಯೇ ? ಕಳೆದ ವರ್ಷ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಜನರಿಗೆ ಕೆಲಸ ಕೊಟ್ಟಿದ್ದೀರಿ. ಮತ್ತೆ ಇದರ ಶಾಖೆಯನ್ನು ಬೇರೆ ಕಡೆ ವಿಸ್ತರಿಸಲಿಕ್ಕೆ ಪ್ರಯತ್ನ ಮಾಡಿದ್ದೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಎಲ್ಲಿ ಹೆಚ್ಚು ಕೆಲಸಗಳನ್ನು ಸಹಿಸುತ್ತಾರೋ ಅಲ್ಲಿ ಶಾಖೆಗಳನ್ನು ಪ್ರಾರಂಭ ಮಾಡುತ್ತಾರೆ ೩ ಸಾವಿರ ಜನ ಪ್ರತಿನಿತ್ಯ ಗ್ರಾಮಾಂತರ ಪ್ರದೇಶಗಳಲ್ಲಿ ಭೂ ಸೇನಾ ನಿಗಮದ ಕೆಳಗೆ ಕೆಲಸ ಮಾಡುತ್ತಾರೆ ಎಂದು ಅಂದಾಜು. ೩೨ ಸಾವಿರ ಜನ ದಿನಗೂಲಿ ಮೇಲೆ ಕೆಲಸ ಮಾಡುತ್ತಾ ಇದ್ದಾರೆ.

ಶ್ರೀ ಜಿ. ರಾಜೂಗೌಡ.—ಕರ್ನಾಟಕ ಭೂ ಸೇನಾ ನಿಗಮ ಕೈಗೊಂಡಿರತಕ್ಕ ಕೆಲಸಗಳನ್ನು ಗುಣಮಟ್ಟದಲ್ಲಿ ಪರೀಕ್ಷೆ ಮಾಡುವುದಕ್ಕೆ ಯಾವುದಾದರೂ ತಾಂತ್ರಿಕ ಸಮಿತಿಯನ್ನು ನೇಮಿಸಿದ್ದೀರಾ, ನೇಮಿಸಿದ್ದರೆ ಅದರ ಫಲಿತಾಂಶ ಏನು ? ಲೋಕೋಪಯೋಗಿ ಇಲಾಖೆಯ ಟೆಂಡರ್ ಕೆಲಸಗಳಲ್ಲಿ ಭೂ ಸೇನಾ ನಿಗಮ ಭಾಗವಹಿಸಲಿಕ್ಕೆ ಆಗಂತ್ತದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಇದಂವರೆಗೆ ಕೆಲವು ಕಡೆ ಮಾಡಿದ್ದಾರೆ, ಎಲ್ಲಾ ಕಡೆ ಮಾಡಲಿಕ್ಕೆ ಅವಕಾಶವಿಲ್ಲ. ಸಾಕಷ್ಟು ಕೆಲಸಗಳನ್ನು ಮಾಡುತ್ತಾ ಇದ್ದಾರೆ. ಟೆಂಡರ್ ಕೆಲಸದಲ್ಲಿ ಭಾಗವಹಿಸುವ ಪ್ರಶ್ನೆ ಉದ್ಭವಿಸಂವುದಿಲ್ಲ. ಗುಣವಂಬ್ಬದ ಬಗ್ಗೆ ಹೇಳುವುದಾದರೆ, ಭೂಸೇನಾ ನಿಗಮಂದಲ್ಲಿ ಸಾಕಷ್ಟು ತಾಂತ್ರಿಕ ಪರಿಣಿತರು ಇದ್ದಾರೆ. ಅವರು ಗುಣಮಟ್ಟವನ್ನು ಪರೀಕ್ಷೆ ಮಾಡುತ್ತಾರೆ. ಗುಣಮಟ್ಟ ಸರಿಯಿಲ್ಲದೇ ಹೋದರೆ ಯಾವ ವ್ಯಕ್ತಿ ಕೆಲಸ ಮಾಡುತ್ತಾನೋ ಅವನಿಂದ ವಸೂಲಂ ಮಾಡಳಕ್ಕ ಕಾರ್ಯಕ್ರಮ ಇದೆ.

ಚಿತ್ತಾಪುರದಲ್ಲಿ ಖಂತುಮಾನ ನೀರಂ ಯೋಜನೆ

೯೫೧ (ಸಿ). ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿತ್ತಾಪುರ ತಾಲ್ಲೂಕಿನಲ್ಲಿರುವ ಕುಲಕುಂದಾ ಮಳಗ, ತುನ್ನೂರು, ಮಂತ್ತು ಮಾಡಗಿ ಗ್ರಾಮಗಳು ಭೀಮಾ ನದಿಯ ದಂಡೆಯ ಮೇಲೆ ಇದ್ದು ಈ ಎಲ್ಲಾ ಗ್ರಾಮಂಗಳಂ ಒಟ್ಟಿಗೆ ೪ ಕಿ.ಮೀ. ಅಂತರದ ಒಳಗಡೆ ಇವೆ ಎಂಬುದಂ ಸರ್ಕಾರದ ಗಮನದಲ್ಲಿದೆಯೇ ?

ಆ) ಹಾಗಿದ್ದಲ್ಲಿ, ಇವೆಲ್ಲಾ ಹಳ್ಳಿಗಳನ್ನು ಸೇರಿಸಿಕೊಂಡು ಒಂದು ಖಚಿತವಾದ ನೀರು ಸಂಗ್ರಹಣೆ ಯೋಜನೆಯನ್ನು ಮಾಡಿದಲ್ಲಿ ಈ ನಾಲ್ಕೂ ಹಳ್ಳಿಗಳಿಗೆ ಕೊಳವೆಗಳ ಮುಖಾಂತರ ನೀರು ಒದಗಿಸುವ ವ್ಯವಸ್ಥೆ ಮಾಡಬಹುದಲ್ಲವೆ ?

ಇ) ಹಾಗಿದ್ದಲ್ಲಿ, ಈ ಕಾರ್ಯಕ್ರಮವನ್ನು ಯಾವಾಗ ತೆಗೆದುಕೊಳ್ಳಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು).— ಆ) ಇದೆ.

ಆ) ೧೯೮೧ರ ಜನಗಣತಿಯ ಪ್ರಕಾರ ಕುಲಕುಂದಾ ಜನಸಂಖ್ಯೆ ೬೩೮, ಮಾಳಿಗ ೩೫೧ ತುನ್ನೂರು ೪೨೨ ಮತ್ತು ಮಾಡಗಿ ೫೬೩, ನಿಗದಿಪಡಿಸಿರುವ ನಿಯಮಾವಳಿ ಮೇರೆ ಈ ಎಲ್ಲಾ ಹಳ್ಳಿಗಳು ಕೊಳವೆ ಮೂಲಕ ನೀರು ಸರಬರಾಜು ಯೋಜನೆಗೆ ಅರ್ಹವಾಗಿರುವುದಿಲ್ಲ ಈ ಗ್ರಾಮಗಳ ದೂರದ ಅಂತರ ೧.೫ ರಿಂದ ೩ ಕಿ.ಮೀ ವರೆಗೆ ಇದ್ದು ಸಂಯುಕ್ತ ನೀರು ಸರಬರಾಜು ಯೋಜನೆ ಆರ್ಥಿಕವಾಗಿ ಸಮಂಜಸವಾಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ,

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೆ, ೧೯೮೧ ರ ಸೆನ್ಸ್ಸ್ ಪ್ರಕಾರ ತೆಗೆದುಕೊಂಡು ನೀವು ಈ ರೀತಿ ಹೇಳಿದ್ದೀರಿ. ೧೯೮೫ರ ಅಸೆಂಬ್ಲಿ ಎಲೆಕ್ಷನ್‌ನಲ್ಲಾಗಲಿ ಪಂಡಲ್ ಪಂಚಾಯಿತಿ ಎಲೆಕ್ಷನ್ ಆದಾಗಲೂ ಕೂಡ ಒಂದೊಂದು ಹಳ್ಳಿಯಲ್ಲಿ ೨-೩ ಸೀಟುಗಳಿವೆ. ೪೦೦-೫೦೦ ಓಟರ್ಸ್ ಇದ್ದಲ್ಲಿ ಈ ಪ್ರಕಾರ ವಿಂಗಡಿಸಿದೆ, ಇದು ಬಹಳ ಹಳೆಯದಿದೆ ಒಂದುವೇಳೆ ಸುಮಾರು ೪೦೨೦-೫೦೦೦ ಪಾಪ್ಯುಲೇಷನ್‌ಗೆ ಮಾಡಲಿಕ್ಕೆ ಆಗುತ್ತದೆಯೇ ? ಇದನ್ನು ಪ್ರಾಕ್ಟಿಕಲ್ಲಾಗಿ ನೋಡಿಕೊಂಡು it is feasible on the basis of the population.....ಳಿ ಹಳ್ಳಿಗಳಿಗೆ ಒಂದು ಸ್ಕೀಂ ಮಾಡಿ ಒಂದು ವಾಟರ್ ಟ್ಯಾಂಕನ್ನು ಕಟ್ಟಿಸಿದರೆ ಅನುಕೂಲವಾಗುತ್ತದೆ. ಅಲ್ಲಿ ಬೋರ್‌ವೆಲ್ ಸಕ್ಸಸ್ ಆಗುವುದಿಲ್ಲ ಆದ್ದರಿಂದ ದಯವಿಮಾಡಿ ಒಂದೇ ಒಂದು ವಾಟರ್ ಟ್ಯಾಂಕನ್ನು ಳಿ ಹಳ್ಳಿಗಳ ಮಧ್ಯದಲ್ಲಿ ಕಟ್ಟಿಸಿಕೊಡಿ. At a time you can supply the water. That is the suggestion which we would like to make to you.

ಶ್ರೀ ಅಬ್ದುಲ್ ನಜೀರ್‌ಸಾಬ್.—ನನ್ನ ಹತ್ತಿರ ಈಗಿರತಕ್ಕ ವರದಿ ಪ್ರಕಾರ Financially it is not feasible. ಆದರೂ ಕೂಡ ಮಾನ್ಯ ಸದಸ್ಯರ ಸಲಹೆಯನ್ನು ಮನಸ್ಸಿನಲ್ಲಿಟ್ಟುಕೊಂಡು ವಿಚಾರ ಮಾಡುತ್ತೇನೆ. ಎರಡನೆಯದಾಗಿ, ಕುಲಕುಂದ ಗ್ರಾಮಕ್ಕೆ ಈ ವರ್ಷದ ಕೊನೆಯವರೆಗೆ ಮಿನಿ ವಾಟರ್‌ಸಪ್ಲೈ ಕೊಡುತ್ತೇವೆ. ಮಳಗ, ತುನ್ನೂರು ಇವೆರಡು ಗ್ರಾಮಗಳಿಗೆ ಕೊಳಾಯಿ ಮುಖಾಂತರ ನೀರನ್ನು ಒದಗಿಸುವ ಕಾರ್ಯ ಕ್ರಮವನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ. ಅಲ್ಲಿಂದ ಅನುಮತಿ ಬಂದರೆ ಈ ವರ್ಷ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಶೀಘ್ರವಾಗಿ ಅನುಮತಿ ಸಿಗಬಹುದು ಆಮೇಲೆ ಟೆಕ್ನಾಲಾಜಿಕಲ್ ಮಿಷನ್ ಕಾನ್‌ಸೆಪ್ಟ್ ಏನಿದೆ ಅದಕ್ಕೆ ಗುಲ್ಬರ್ಗವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕೇಂದ್ರಸರ್ಕಾರದ ಅನುಮತಿ ಸಿಕ್ಕಿದ ತಕ್ಷಣ ನೀರಾವರಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಬಿ. ಶಾಣಪ್ಪ —೩೫ ಹಳ್ಳಿಗಳು ಭೀಮಾ ನದಿಯ ದಂಡೆ ಮೇಲೆ ಬರುತ್ತವೆ. ಅಲ್ಲಿ ಬೋರ್‌ವೆಲ್ ಸಕ್ಸಸ್‌ಫುಲ್ ಆಗುವುದಿಲ್ಲ. ಆದುದರಿಂದ ಈ ೪ ಹಳ್ಳಿಗಳನ್ನು ಎಕ್ಸಾಂಪಲ್ ತೆಗೆದು ಕೊಳ್ಳಿ. ಇಂತಹ ಒಂದು ರೀಜನಲ್ ವಾಟರ್ ಸಪ್ಲೈ ಸ್ಕೀಂ ತಮ್ಮ ಡಿಪಾರ್ಟ್‌ಮೆಂಟ್‌ನಲ್ಲಿದೆ. ಎಲ್ಲಾ ಹಳ್ಳಿಗಳಿಗೂ ಹಣ ಖರ್ಚು ಮಾಡುವ ಬದಲು ಒಂದು ಹಳ್ಳಿಗೆ ಹಣ ಖರ್ಚು ಮಾಡಿ, ನೀರು ಒದಗಿಸುವುದಕ್ಕೆ ಕ್ರಮ ತೆಗೆದುಕೊಳ್ಳಿ;

ಶ್ರೀ ಅಬ್ದುಲ್ ನಜೀರ್‌ಸಾಬ್.—ಟೆಕ್ನಾಲಾಜಿಕಲ್ ಮಿಷನ್ ಬರುವುದರಿಂದ, ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆ. ಸಮಗ್ರ ಸರ್ವೆ ಕಾರ್ಯ ಕೈಗೊಳ್ಳುವುದರಿಂದ ಮೂಲ ಭೂತ ಸಮಸ್ಯೆಗಳು ಪರಿಹಾರವಾಗತಕ್ಕೆ ಕಾಲ ಸನ್ನಿಹಿತವಾಗಿದೆ.